# ಸೃಷ್ಟಿ ವಿಚಾರ

ನಮ್ಮ ಬ್ರಹ್ಮಾಂಡದ ಸೃಷ್ಟಿಯೇ ವಿಚಿತ್ರ. ನಾವು ಜೀವಿಸುತ್ತಿರುವ ಈ ಲೋಕವನ್ನು ಪೂರ್ವಿಕರು 'ಬ್ರಹ್ಮಾಂಡವೆಂದು ಕರೆದರು. ಇದು ಸಾಂಕೇತಿಕವಾಗಿಯೂ ಅಪೂರ್ವ ಕಲ್ಪನೆ. ಮೊದಲು ಕಾಲಾತೀತನಾದ ಬ್ರಹ್ಮನೊಬ್ಬ ಇದ್ದ. ಅವನಿಗೆ ಕೊನೆಯೂ ಇರಲಿಲ್ಲ ಮೊದಲೂ ಇರಲಿಲ್ಲ; ಹುಟ್ಟುಸಾವು ಎಂಬ ಉಸಾಬರಿಯೂ ಇರಲಿಲ್ಲ. ತರ್ಕ ಮತ್ತು ಅರ್ಥಗಳಿಗೆ ಅವನು ಅತೀತನಾಗಿದ್ದ. ಆ ಬ್ರಹ್ಮನೇ ಈ 'ಬ್ರಹ್ಮಾಂಡವನ್ನು ಸೃಜಿಸಿದ್ದು. ಲೋಕವೇನೋ ಸೃಷ್ಟಿಯಾಯಿತು. ನಿಮಿಷ, ಗಂಟೆ, ರಾತ್ರಿಹಗಲು, ವರ್ಷ ಮುಂತಾದ ಕಾಲಗಣನೆ ಆಗಬೇಕಷ್ಟೆ. ಪ್ರಾಚೀನರು ಕಾಲಕಲ್ಪನೆಯನ್ನು ಗುರುತಿಸಿಕೊಂಡರು. ಒಮ್ಮೆ ಕಣ್ಣುಮುಚ್ಚಿ ತೆಗೆಯುವ ಕಾಲಮಾನಕ್ಕೆ 'ನಿಮೇಷ ಎಂದು ಕರೆದುಕೊಂಡರು. ಅಂಥ ಹದಿನೈದು ನಿಮೇಷಗಳಿಗೆ 'ಕಾಷ್ಠಾಕಲೆ ಎಂದು ಹೆಸರಿಟ್ಟರು.

ಇನ್ನು ಮೂವತ್ತು 'ಕಾಷ್ಠಾಕಲೆ ಸೇರಿದಾಗ ಒಂದು 'ಕಲೆ ಎನಿಸಿಕೊಂಡಿತು. ಮೂವತ್ತು ಕಲೆಗಳು ಮತ್ತು ಮೂರು ಕಾಷ್ಠಾಗಳು ಸೇರಿಕೊಂಡಾಗ ಒಂದು 'ಮುಹೂರ್ತ ಎಂಬ ಪರಿಕಲ್ಪನೆ ಮೂಡಿತು. ಮೂವತ್ತು ಮುಹೂರ್ತಗಳಿಂದ ಒಂದು ಹಗಲು ಒಂದು ರಾತ್ರಿ ಎನಿಸಿಕೊಂಡಿತು. ಮೂವತ್ತು ಹಗಲುರಾತ್ರಿಗಳು ಸೇರಿಕೊಂಡಾಗ ಒಂದು 'ಮಾಸ ಎಂದು ಕರೆಸಿಕೊಂಡಿತು. ಇನ್ನು ಹನ್ನೆರಡು ಮಾಸಗಳಿಗೆ ಒಂದು ಸಂವತ್ಸರ. ಪ್ರತಿ ಸಂವತ್ಸರಕ್ಕೂ ದಕ್ಷಿಣಾಯನ ಮತ್ತು ಉತ್ತರಾಯನಗಳೆಂದು ಪೂರ್ವಿಕರು ಕರೆದುಕೊಂಡರು. ಆರುತಿಂಗಳು ದಕ್ಷಿಣಾಯನ ಮತ್ತೆ ಆರುತಿಂಗಳು ಉತ್ತರಾಯನ ಎಂದು ಅವರು ಹೆಸರಿಸಿದರು.

ಆಮೇಲೆ ನಾಲ್ಕು ಯುಗಗಳ ಕಲ್ಪನೆ ಬೆಳೆಯಿತು. ಕೃತಯುಗದ ಕಾಲಾವಧಿ ನಾಲ್ಕು ಸಾವಿರ ದಿವ್ಯವರ್ಷ. ಈ ಸಂಖ್ಯೆ ಕೇಳಿ ಗಾಬರಿಯಾಗುವುದೇನೂ ಬೇಡ. ದಿವ್ಯವರ್ಷ ಎಂದರೆ ದೇವರ ಒಂದು ವರ್ಷ. ಈ ಯುಗದ ಸಂಧ್ಯಾಂಶ ನಾಲ್ಕುನೂರು ದಿವ್ಯವರ್ಷಗಳು. ಇನ್ನು ತ್ರೇತಾಯುಗದಲ್ಲಿ ಮೂರುಸಾವಿರ ದಿವ್ಯವರ್ಷಗಳು. ಆಮೇಲೆ ದ್ವಾಪರಯುಗದಲ್ಲಿ ಎರಡುಸಾವಿರ ದಿವ್ಯವರ್ಷಗಳು. ಕಲಿಯುಗ ಒಂದು ಸಾವಿರ ದಿವ್ಯವರ್ಷಗಳನ್ನು ಹೊಂದಿದೆ. ಪ್ರತಿಯುಗದಲ್ಲೂ ಒಂದೊಂದು ಸಾವಿರವರ್ಷ ಕಡಿಮೆ ಆಗುವುದನ್ನು ಗಮನಿಸಬಹುದು. ಹೀಗೆ ಹತ್ತುಸಾವಿರ ದಿವ್ಯವರ್ಷಗಳ ಸಂಯೋಗದಿಂದ ನಾಲ್ಕುಯುಗಗಳ ಕಾಲಚಕ್ರ ಕಲ್ಪನೆಯನ್ನು ಪೂರ್ವಿಕರು ರೂಪಿಸಿದರು.

ಪೂರ್ವಿಕರು ನಾಲ್ಕುಯುಗಗಳನ್ನು ಹೇಳಿದ ಮೇಲೆ ಪ್ರತಿಯೊಂದು ಯುಗದ ಸತ್ಯ ಮತ್ತು ಧರ್ಮಗಳ ಮರ್ಮವನ್ನು ಬಿಡಿಸಿಟ್ಟರು. ಕೃತಯುಗದಲ್ಲಿ ಸತ್ಯ ಮತ್ತು ಧರ್ಮಗಳು ನಾಲ್ಕು ಕಾಲುಗಳನ್ನು ಊರಿ ಭದ್ರವಾಗಿರುವುದನ್ನು ತಿಳಿಸಿದರು. ಈ ಯುಗದ ಜನರು ಸಹಜವಾಗಿಯೇ ಸತ್ಯಸಂಧರೂ ಧರ್ಮಾತ್ಮರೂ ಆಗಿದ್ದರು. ಆದ್ದರಿಂದ ಈ ಯುಗಕ್ಕೆ ಧರ್ಮಗ್ರಂಥಗಳ ಅಗತ್ಯವಿರಲಿಲ್ಲ. ಈ ಯುಗದಲ್ಲಿ ಜನರ ಆಯುಷ್ಯ ನಾಲ್ಕುನೂರು ವರ್ಷಗಳು. ಇಲ್ಲಿ ಜನ ರೋಗಮುಕ್ತರಾಗಿದ್ದರು. ಸ್ವಪ್ರಯತ್ನ ಇಲ್ಲದೆಯೇ ಆ ಜನರ ಆಸೆಆಕಾಂಕ್ಷೆಗಳು ಈಡೇರುತ್ತಿದ್ದವು. ಇನ್ನು ತ್ರೇತಾಯುಗದಲ್ಲಿಯಾದರೂ ಸತ್ಯ ಮತ್ತು ಧರ್ಮಗಳು ಮೂರುಕಾಲಿನ ಮೇಲೆ ನಿಂತಿದ್ದವು. ಈ ಯುಗದ ಜನರಿಗೆ ತಪಸ್ಸು ಮಾಡುವುದೇ ಕರ್ತವ್ಯವಾಗಿತ್ತು. ಆದರೆ, ಜ್ಞಾನಸಂಪಾದನೆ ಪರಮ ಉದ್ದೇಶವಾಗಿರುತ್ತಿತ್ತು. ಇಲ್ಲಿಯ ಜನರ ಆಯುಷ್ಯ ಮುನ್ನೂರು ವರ್ಷ. ಜನರಲ್ಲಿ ಸತ್ಯಸಂಧತೆ ಮತ್ತು ಧಾರ್ಮಿಕ ಪ್ರವೃತ್ತಿ ಕೃತಯುಗಕ್ಕಿಂತ ಕೊಂಚ ಕಡಿಮೆ. ಇನ್ನು ದ್ವಾಪರಯುಗಕ್ಕೆ ಬಂದರೆ ಸತ್ಯ ಮತ್ತು ಧರ್ಮಗಳು ಎರಡು ಕಾಲಿನ ಮೇಲೆ ನಿಂತಿದ್ದವು. ಇಲ್ಲಿ ಧಾರ್ಮಿಕ ಪ್ರವೃತ್ತಿ ಮತ್ತು ಸತ್ಯಸಂಧತೆ ಕಡಿಮೆ. ಜನರ ಆಯುಷ್ಯ ಇನ್ನೂರು ವರ್ಷಗಳು ಮಾತ್ರ. ಕೊನೆಯದಾದ ಕಲಿಯುಗದಲ್ಲಿ ಸತ್ಯಧರ್ಮಗಳು ಒಂಟಿಕಾಲಿನ ಮೇಲೆ ನಿಂತಿದ್ದವು. ಈ ಜನರ ಆಯುಷ್ಯ ನೂರುವರ್ಷ ಮಾತ್ರ. ಈ ಯುಗದಲ್ಲಿ ದಾನವೇ ಪರಮ ಕರ್ತವ್ಯವಾಗಿತ್ತು.

ಇದು ಭಾರತದ ಪ್ರಾಚೀನ ಋಷಿಗಳು ಸೃಷ್ಟಿಯ ವಿಸ್ತಾರವನ್ನು ರೂಪಿಸಿದ ಬಗೆ. ಅವರು 'ನಿಮೇಷದಿಂದ ಪ್ರಾರಂಭಿಸಿ ಸಂವತ್ಸರ ಮತ್ತು ಯುಗಕಲ್ಪನೆಯ ವರೆಗೂ ಬಂದರು. ಈ ನಾಲ್ಕು ಯುಗಗಳ ಒಂದು ಚಕ್ರವನ್ನು 'ಕಲ್ಪವೆಂದು ಕರೆದರು. ಇಲ್ಲಿ ಕಾಲದ ಕಲ್ಪನೆಯಲ್ಲಿ ಜೀವನದ ನೆಲೆಗಳನ್ನು ಹೇಳಿಲ್ಲ. ಜೀವನದ ಮೌಲ್ಯಗಳ ನೆಲೆಯಲ್ಲಿ ಕಾಲದ ಕಲ್ಪನೆಗಳನ್ನು ಪೂರ್ವಿಕರು ನಮಗೆ ತಿಳಿಸುತ್ತಿದ್ದಾರೆ. ಭಾರತೀಯರು ಕಲ್ಪಿಸಿದ 'ಕಾಲಮಾನ ಅಥವ 'ಸೃಷ್ಟಿಮಾನದ ಕಲ್ಪನೆ ಮಾನವ ಜೀವನವನ್ನೇ ಕೇಂದ್ರ ಮಾಡಿಕೊಂಡಿತ್ತೆಂಬುದನ್ನು ಶ್ರೀಮನ್ಮಹಾಭಾರತದ ಶಾಂತಿಪರ್ವ ಮತ್ತು ಅನುಶಾಸನ ಪರ್ವಗಳಲ್ಲಿ ಸೂಕ್ಷ್ಮವಾಗಿ ವಿವರಿಸಲಾಗಿದೆ. ನಾವು ಸೃಷ್ಟಿಲಯಗಳ ಬಗೆಗೆ ವಿಚಾರಿಸುವಾಗ ಈ ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯ. ಸೃಷ್ಟಿಯನ್ನು ನಾವು ಅರ್ಥಮಾಡಿಕೊಳ್ಳಲು ಭೂತಪ್ರಕೃತಿಯ ಮರ್ಮವನ್ನು ತಿಳಿಯುವುದು ಅವಶ್ಯ. ನಾವು ಈ ಸಂಗತಿಯನ್ನು ತಿಳಿದುಕೊಂಡು ವರ್ತಮಾನಕ್ಕೆ ಬರಬಹುದು.

ನಾವು ಆಧುನಿಕಕಾಲಕ್ಕೆ ಬಂದಾಗಿದೆ. ನೂರೈವತ್ತು ವರ್ಷಗಳ ಈಚೆಗೆ ನಾವು ಏನೆಲ್ಲಾ ಸಾಧಿಸಿದ್ದೇವೆ. ಅಭಿವೃದ್ಧಿಯ ಕಲ್ಪನೆಯಲ್ಲಿ ನಮ್ಮನ್ನು ಮೀರಿಸುವವರಿಲ್ಲವೆಂಬ 'ಅಹಮಿಕೆ ನಮ್ಮನ್ನು ಈವರೆಗೂ ತಂದು ನಿಲ್ಲಿಸಿದೆ. ನಮ್ಮ ಜೀವನ, ಶೈಲಿ, ಮೌಲ್ಯ, ಸತ್ಯ, ಧರ್ಮಗಳ ವ್ಯಾಖ್ಯಾನ ನಮಗೆ ಬೇಕಾಗುವಂತೆ ವ್ಯಾಖ್ಯಾನಿಸಿಕೊಂಡಿದ್ದೇವೆ. ನಾವು ಇರುವುದು ಸಂಸ್ಕೃತಿಯ ನೆಲೆಯಲ್ಲಿ. ಆದರೆ, ನಾವು 'ಪ್ರಕೃತಿ ತತ್ವವನ್ನು ಮರೆತಿದ್ದೇವೆ. ಭೂತಪ್ರಕೃತಿ ಮತ್ತು ಮನುಷ್ಯಪ್ರಕೃತಿ ಅನ್ಯೋನ್ಯಾಶ್ರಯವನ್ನು ಹೊಂದಿರುತ್ತವೆ. ಸತ್ಯ ಮತ್ತು ಧರ್ಮ ಕೇವಲ ಸಂಸ್ಕೃತಿಗೆ ಮಾತ್ರ ಸೇರಿದ್ದಲ್ಲ. ಅದು ಪ್ರಕೃತಿತತ್ವವನ್ನು ಆಶ್ರಯಿಸಿಕೊಂಡಿರುತ್ತದೆ. 'ಅತಿ ಎಂಬುದು ಸಂಸ್ಕೃತಿಯಾದರೆ 'ಇತಿ ಎಂಬುದು ಪ್ರಕೃತಿಯಾಗಿ ಅದನ್ನು ಹಿಡಿದು ನಿಲ್ಲಿಸಿಕೊಳ್ಳುತ್ತದೆ. ಆಗ ಸತ್ಯ ಧರ್ಮಗಳು ಒಂಟಿಕಾಲಿನಿಂದ ಎರಡುಕಾಲಗಳ ಕಡೆಗೆ ನಡೆದು, ಮೂರು ಕಾಲುಗಳಲ್ಲಿ ನಿಂತು ನಾಲ್ಕು ಕಾಲುಗಳಲ್ಲಿ ಸುಭದ್ರವಾಗಿ ನೆಲೆ ಊರಲು ಸಾಧ್ಯವಾಗುತ್ತದೆ. ಇದು ಸಂಸ್ಕೃತಿಯ ನಡಿಗೆ. ಈ ಎಚ್ಚರದ ನಡಿಗೆ ಪ್ರತಿಯುಗಕ್ಕೂ ಬೇಕು. ಇಲ್ಲದಿದ್ದರೆ ಭೂತಪ್ರಕೃತಿ ನಮ್ಮನ್ನು ತಡೆಹಿಡಿದು ನಿಲ್ಲಿಸುತ್ತದೆ. ಪ್ರಕೃತಿಸಂಸ್ಕೃತಿಗಳ ಸುಸಾಂಗತ್ಯ ಇಲ್ಲದಿದ್ದರೆ, ಮಾನವ ಸಂಸ್ಕೃತಿ ನಾಶದ ತುತ್ತತುದಿಗೆ ಬಂದು ನಿಲ್ಲುತ್ತದೆ. ಕಳೆದ ನೂರು ವರ್ಷಗಳ ಅವಧಿಯಲ್ಲಿ ನಡೆದಿರುವ ಅಸಾಂಗತ್ಯದ ಸಂಗತಿಗಳು ನಮ್ಮನ್ನು ಎಚ್ಚರಿಸುತ್ತಿವೆ. ಆದರೆ, ನಾವು ಕುರುಡರಾಗಿ ಕುಳಿತಿದ್ದೇವೆ.

■ ಪುರಂಜೀವಿ


ಓಂ ✝ ☪ ಸರ್ವೇಜನಾಃ ಸುಖಿನೋ ಭವಂತು ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಶ್ರೀ ಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.